ಇ) 2007–08ನೇ ಸಾಲಿನಲ್ಲಿ ಮಂಜೂರಾದ 66 ನೂತನ ಸರ್ಕಾರಿ ಪ್ರೌಢಶಾಲೆಗಳಲ್ಲಿ ಆಂಗ್ಲಭಾಷಾ ಶಿಕ್ಷಕರ ಹುದ್ದೆ ಮಂಜೂರಾಗಬೇಕಾಗಿದೆ.

ಈ) ಹೌದು. ಈ ಬಗ್ಗೆ ಈಗಾಗಲೇ ಆಂಗ್ಲಭಾಷಾ ಶಿಕ್ಷಕರನ್ನು ಪ್ರತ್ಯೇಕವಾಗಿ ನೇಮಕ ಮಾಡಿಕೊಳ್ಳಲಾಗುತ್ತಿದೆ.

ಸರ್ಕಾರಿ ಕಾಲೇಜುಗಳು ಹಾಗೂ ಶಿಕ್ಷಕರ ಕೊರತೆ ಬಗ್ಗೆ

763 (327) ಶ್ರೀ ಕುಮಾರಸ್ವಾಮಿ ಕೆ.ಜಿ (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಪ್ರಾಥಮಿಕ/ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿವೆ (ಗ್ರಾಮವಾರು ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು);

ಆ) ಈ ಎಲ್ಲಾ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಸಂಪೂರ್ಣವಾಗಿ ಒದಗಿಸಲಾಗಿದೆಯೇ (ಕುಡಿಯುವ ನೀರು, ಶೌಚಾಲಯ, ಕೊಠಡಿಗಳ ವಿವರ ನೀಡುವುದು);

ಇ) ಜಿಲ್ಲೆಯಲ್ಲಿ ಹೊಸದಾಗಿ ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ವಿವರ ಒದಗಿಸುವುದು);

ಈ) ವಿದ್ಯಾರ್ಥಿಗಳ ಅನುಪಾತಕ್ಕೆ ತಕ್ಕಂತೆ ಶಿಕ್ಷಕರನ್ನು ನೀಡಲಾಗಿದೆಯೇ;

ಉ) ಜಿಲ್ಲೆಯಲ್ಲಿ ಕೊರತೆ ಇರುವ ಶಿಕ್ಷಕರ ಸಂಖ್ಯೆ ಎಷ್ಟು ಪ್ರತಿ ಯೊಂದು ಶಾಲೆಯಲ್ಲಿ ಯಾವ್ಯಾವ ವಿಷಯಗಳ ಶೀಕ್ಷಕರ ಕೊರತೆ ಇದೆ (ವಿವರ ನೀಡುವುದು);

ಊ) ಕಳೆದ 3 ವರ್ಷಗಳಲ್ಲಿ ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ಶಿಕ್ಷಣ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯಕ್ರಮಗಳ (ಸೈಕಲ್, ನೋಟ್ ಪುಸ್ತಕ, ಬ್ಯಾಗ್, ಸಮವಸ್ತ್ರ ವಿವರಗಳನ್ನು ನೀಡುವುದು);

ಋ) ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆ ಎದುರಿಸುತ್ತಿ ರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಶಿವಮೊಗ್ಗ ಜಿಲ್ಲೆಯಲ್ಲಿ 1938 ಸರ್ಕಾರಿ ಪ್ರಾಥಮಿಕ ಮತ್ತು 151 ಸರ್ಕಾರಿ ಪ್ರೌಢಶಾಲೆಗಳಿವೆ. ಗ್ರಾಮವಾರು ವಿಧಾನಸಭಾ ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ.

ತಾಲ್ಲೂಕು	ಪ್ರಾಥಮಿಕ	ಪ್ರೌಢ
ಭದ್ರಾವತಿ	275	22
ಸಾಗರ	401	27
ಶಿಕಾರಿಪುರ	225	24
ಶಿವಮೊಗ್ಗ ಗ್ರಾಮಾಂತರ	254	18
ಶಿವಮೊಗ್ಗ ನಗರ	69	06
ಸೊರಬ	350	17
ತೀರ್ಥಹಳ್ಳಿ	364	37
ಒಟ್ಟು	**1938**	**151**

ಆ) ಈ ಎಲ್ಲಾ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವ ವಿವರ ಈ ಕೆಳಕಂಡಂತಿದೆ.

ವಿವರ	ಒದಗಿಸಿರುವುದು		ಒದಗಿಸಬೇಕಾಗಿರುವುದು	
	ಪ್ರಾಥಮಿಕ	ಪ್ರೌಢ	ಪ್ರಾಥಮಿಕ	ಪ್ರೌಢ
ಶೌಚಾಲಯ	1910	136	28	15
ಕುಡಿಯುವ ನೀರು	1575	118	363	33
ಕೊಠಡಿ	–	150	–	01

ಇ) 56 ಸರ್ಕಾರಿ ಪ್ರೌಢ ಶಾಲೆಗಳ ಪ್ರಾರಂಭಿಸಲು ಪ್ರಸ್ತಾವನೆ ಬಂದಿರುತ್ತದೆ.

ಹೊಸ ಸರ್ಕಾರಿ ಪ್ರೌಢ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಯಾವುದೆ ತೀರ್ಮಾನವನ್ನು ಕೈಗೊಂಡಿರುವುದಿಲ್ಲ.

ಈ) ನೀಡಲಾಗಿದೆ.

ಉ) ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದಿಲ್ಲ.

ಪ್ರೌಢ ಶಾಲೆಗಳಲ್ಲಿ 32 ಆಂಗ್ಲ ಹುದ್ದೆಗಳು, 3 ತಮಿಳು ಹಾಗೂ 2 ಉರ್ದು ಹುದ್ದೆಗಳ ಅವಶ್ಯಕತೆ ಇರುತ್ತದೆ.

ಊ) ಕಳೆದ 3 ವರ್ಷಗಳಲ್ಲಿ ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ಶಿಕ್ಷಣ ಅಭಿವೃದ್ಧಿಗಾಗಿ ಉಚಿತ ಸೈಕಲ್, ನೋಟ್ ಪುಸ್ತಕ, ಬ್ಯಾಗ್, ಸಮವಸ್ತ್ರ ಕಾರ್ಯಕ್ರಮಗಳಡಿಯ ಫಲಾನುಭವಿಗಳ ವಿವರಗಳು ಈ ಕೆಳಕಂಡಂತಿದೆ.;

ಕ್ರ ಸಂ	ಕಾರ್ಯಕ್ರಮದ ವಿವರ	2007–08	2008–09	2009–10
1	ಸೈಕಲ್	4421	6158	5457
2	ನೋಟ್ ಪುಸ್ತಕ, ಬ್ಯಾಗ್,	23324	50194	47773
3	ಸಮವಸ್ತ್ರ	1,82,333	1,97,732	1,94,063

ಋ) ಬಂದಿದೆ.

ವಯಸ್ಕರ ಶಿಕ್ಷಣ ಕಾರ್ಯಕ್ರಮಗಳ ಬಗ್ಗೆ

764 (328) ಶ್ರೀ ಕುಮಾರಸ್ವಾಮಿ ಕೆ.ಜಿ (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಯಸ್ಕರ ಶಿಕ್ಷಣ ಇಲಾಖೆಯಲ್ಲಿ ಯಾವ ಯಾವ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಪ್ರತಿಯೊಂದು ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಫಲಾನುಭವಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ಸ್ಥಳ, ಸಂಖ್ಯೆ, ಗ್ರಾಮ, ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು);

ಇ) ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಜನ ಶಿಕ್ಷಕರಿದ್ದಾರೆ, ಅವರಿಗೆ ನೀಡುತ್ತಿರುವ ಸಂಬಳ–ಸಾರಿಗೆ ಎಷ್ಟು (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು);

ಈ) ಶಿಕ್ಷಕರ ಹೆಸರು, ವಿಳಾಸ ಮತ್ತು ಅವರ ಕೇಂದ್ರ ಸ್ಥಾನದ ಪೂರ್ಣ ವಿವರ ನೀಡುವುದು;